**<u>ಸಾಕ್ಷಿಗೆ ದಿನಾಂಕ 06.09.2025 ರಂದು-ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಆರ್ ಬಿ ವಕೀಲರಿಂದಃ</u>**

1. ದಿಃ22.09.2023 ರಂದು ಸ್ಪಂದನ ಆಸ್ಪತ್ರೆಗೆ ಅರ್ಜಿದಾರರನ್ನು ತೈಜೋರವರು ದಾಖಲಿಸಿರುತ್ತಾರೆ ಎಂದರೆ ಸರಿ. ದಿಃ27.09.2023 ರಂದು ಅರ್ಜಿದಾರರನ್ನು ಸ್ಪಂದನ ಆಸ್ಪತ್ರೆಯಿಂದ ಆರ್.ಎಲ್. ಜಾಲಪ್ಪ ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದರೆ ಸರಿ. ಸ್ಪಂದನ ಆಸ್ಪತ್ರೆಯಲ್ಲಿ ಅರ್ಜಿದಾರರಿಗೆ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ಸ್ಪಂದನ ಆಸ್ಪತ್ರೆಯ ದಾಖಲೆಯ ಪ್ರಕಾರ ಅರ್ಜಿದಾರರಿಗೆ ಹೊರ ಮತ್ತು ಒಳ ಗಾಯಗಳು ಆಗಿರುತ್ತವೆ ಎಂದರೆ ಸರಿ.

2. ಅಪಘಾತವು ದಿಃ21.09.2023 ರಂದು ಮಧ್ಯಾಹ್ನ 2.30 ರ ಸಮಯದಲ್ಲಿ ಆಗಿರುತ್ತದೆ. ಅಪಘಾತವು ಮಧ್ಯಾಹ್ನ 2.30 ರ ಸಮಯದಲ್ಲಿ ಆದರೂ ಸಹ ದಿಃ22.09.2023 ರ ಬೆಳಗ್ಗೆ 6.00 ರವರೆಗೆ ಯಾವುದೇ ಆಸ್ಪತ್ರೆಗೂ ಕರೆದುಕೊಂಡು ಹೋಗಿರಲಿಲ್ಲವೇ ಎಂದರೆ ಕರೆದುಕೊಂಡು ಹೋಗಿರಲಿಲ್ಲ. ಅಪಘಾತದ ಸಮಯದಲ್ಲಿ ಅರ್ಜಿದಾರರ ಜೊತೆಗೆ ಬೇರೆ ಯಾರು ಇರಲಿಲ್ಲ. ದಿಃ22.09.2023 ರಂದು ಬೆಳಿಗ್ಗೆ 6.00 ಗಂಟೆಗೆ ಟೌನ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಅರ್ಜಿದಾರರಿಗೆ ಪ್ರಜ್ಞೆ ಇರಲಿಲ್ಲ ಎಂದರೆ ಸರಿ.

3. ಅಪಘಾತದ ಜಾಗದಿಂದ ತೈಜೋರವರ ಮನೆ 10 ಕಿ.ಮೀ ದೂರದಲ್ಲಿದೆ. ಅಪಘಾತದ ಜಾಗದಿಂದ ತೈಜೋರವರ ಮನೆಗೆ ಅರ್ಜಿದಾರರನ್ನು ಯಾವುದರ ಮುಖಾಂತರ ಸ್ಥಳಾಂತರ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿಃ22.09.2023 ರ ಬೆಳಿಗ್ಗೆ 6.00 ಗಂಟೆಯಿಂದ ಮಧ್ಯಾಹ್ನದವರೆಗೆ ನಾನು ಸ್ಪಂದನ ಆಸ್ಪತ್ರೆಗೆ ಹೋಗಿ ಅರ್ಜಿದಾರರನ್ನು ನೋಡುವವರೆಗೆ ನಡೆದ ಪ್ರಕ್ರಿಯೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

4. ಪೊಲೀಸ್ ದಾಖಲೆಗಳ ಪ್ರಕಾರ ತೈಜೋರವರ ವಿಳಾಸ ಬೆಂಗಳೂರು ಎಂದರೆ ಸರಿ. ತೈಜೋರವರು ಅಪಘಾತದ ಜಾಗದಿಂದ ಅವರ ತೋಟದ ಮನೆಗೆ ಅರ್ಜಿದಾರರನ್ನು ಸ್ಥಳಾಂತರಿಸಿದ ಬಗ್ಗೆ ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ನನ್ನ ಪ್ರಕಾರ ಅರ್ಜಿದಾರರನ್ನು ಅಪಘಾತದ ನಂತರ ಅಪಘಾತದ ಸ್ಥಳದಲ್ಲಿದ್ದ ಸಾರ್ವಜನಿಕರು ತೈಜೋರವರ ತೋಟದ ಮನೆಗೆ ಸ್ಥಳಾಂತರಿಸಿರುತ್ತಾರೆ. ಅರ್ಜಿದಾರರನ್ನು ತೈಜೋರವರ ತೋಟದ ಮನೆಗೆ ಸ್ಥಳಾಂತರಿಸಿದಾಗ ತೈಜೋರವರು ತೋಟದ ಮನೆಯಲ್ಲಿ ಇದ್ದರೋ ಇಲ್ಲವೋ ಎಂದು ನನಗೆ ಮಾಹಿತಿ ಇಲ್ಲ. ನಾನು ಆಸ್ಪತ್ರೆಗೆ ಹೋದ ನಂತರ ತೈಜೋರವರನ್ನು ಅವರು(ತೈಜೋ) ತೋಟದ ಮನೆಯಲ್ಲಿ ಇದ್ದೀರಾ ಅಥವಾ ಬೆಂಗಳೂರಿನಿಂದ ಬಂದಿದ್ದೀರಾ ಎಂದು ನಾನು ಕೇಳಿರುವುದಿಲ್ಲ.

5. ಸ್ಪಂದನ ಆಸ್ಪತ್ರೆಗೆ ಅರ್ಜಿದಾರರನ್ನು ಕರೆದುಕೊಂಡು ಹೋದವರು ತೈಜೋರವರು ಮತ್ತು ಅಪಘಾತದ ಬಗ್ಗೆ ಮಾಹಿತಿ ನೀಡಿದವರು ತೈಜೋರವರು ಎಂದರೆ ಸರಿ. ನಿಪಿ.29 ಮತ್ತು ನಿಆರ್.1 ರಲ್ಲಿ ದ್ವಿಚಕ್ರ ವಾಹನದ ಮೇಲೆ ಹೋಗುವಾಗ ಅಪಘಾತವಾಗಿದೆ ಎಂದು ನಮೂದಾಗಿದ್ದು ಎಲ್ಲಿಯೂ ಸಹ ಮತ್ತೊಂದು ವಾಹನ ಅಪಘಾತದಲ್ಲಿ ಭಾಗಿಯಾಗಿದೆ ಎಂದು ನಮೂದಾಗಿಲ್ಲ ಎಂದರೆ ಸರಿ. ತೈಜೋರವರ ತೋಟದ ಮನೆಯಲ್ಲಿ ಅರ್ಜಿದಾರರ ಜೊತೆಗೆ ಕೆಲಸ ಮಾಡುತ್ತಿದ್ದ ಸಹೋದ್ಯೋಗಿಗಳು ಇರುತ್ತಾರೆ. ನಾನು ಹೇಳಿದಂತೆ ಅರ್ಜಿದಾರರಿಗೆ ಗಾಯಗಳು ಅಪಘಾತದಿಂದವಾಗದೇ,ಒಂದು ವೇಳೆ ದಿಃ21.09.2023 ರಂದು ಮಧ್ಯಾಹ್ನ 2.30 ಕ್ಕೆ ಗಾಯಗಳು ಆಗಿದ್ದರೆ, ದಿಃ22.09.2023 ರ ಬೆಳಿಗ್ಗೆ 6.00 ಗಂಟೆಯವರೆಗೆ ಗಾಯದ ನೋವನ್ನು ತಡೆದುಕೊಳ್ಳಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ.

6. ನನ್ನ ದೂರು ಮತ್ತು ಮುಖ್ಯ ವಿಚಾರಣಾ ಪ್ರಮಣಪತ್ರದ ಪ್ರಕಾರ ಅಪಘಾತವು ಮಧ್ಯಾಹ್ನ 2.00 ಗಂಟೆಗೆ ಆಗಿದೆ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ.29 ಮತ್ತು ನಿಆರ್.1

ಪ್ರಕಾರ ಅಪಘಾತದ ಸಮಯ ತಾಳೆಯಾಗುವುದಿಲ್ಲ ಎಂದರೆ ಸರಿ. ಅಪಘಾತದ ನಂತರ ದಿಃ22.09.2023 ರ ಬೆಳಿಗ್ಗೆ 6.00 ಗಂಟೆಯವರೆಗೆ ಅರ್ಜಿದಾರರ ಜೊತೆ ಯಾರು ಇದ್ದರು ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿ.

**2 ನೇ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ, ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶವನ್ನು ನೀಡಲಾಗಿರುತ್ತದೆ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**